LEGISLATIVE ASSEMBLY.

SEVENTH DAY.

Friday, 24th March 1950.

The Assembly met in the Assembly Hall, Old Public Offices, Bangalore, at One of the Clock.

Mr. Speaker (Sri V. Venkatappa) in the Chair.

STARRED QUESTIONS

(to which oral answers were given).

Mr. SPEAKER (Sri V. Venkatappa).—Questions. Question No. 62.

Mushir-ul-Mulk J. MAHOMED IMAM (Chitaldrug *cum* Tumkur—Muslim).—Mr. Siddappa is not here. He has asked me to put the question.

Mr. SPEAKER.—In such cases it is usual for the Member to make a request in writing to the Chair.

Janab J. MAHOMED IMAM.—Mr. Siddappa has not given anything in writing. He has asked me orally to put the question.

Mr. SPEAKER.—The Chair regrets that it is not possible. Question No. 62 will be treated as an unstarred question. Next Question, *i.e.*, question No. 87.

Dr. C. R. Reddy's report on the existing Educational system.

*Q—87. **Sri M. V. KRISHNAPPA** (Kolar District—General).—

Will the Government be pleased to state:—

(*a*) when Dr. C. R. Reddy submitted his report on the existing educational system and the changes that are to be brought about in it;

(*b*) whether they contemplate to take any action and bring about the recommended changes in the existing educational system in the State?

*A. **Sri T. SIDDALINGIAH** (Minister for Education and Public Health).—

(*a*) In May 1949.

(*b*) The matter is under consideration of Government.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಡಾಕ್ಟರ್ ಸಿ. ಆರ್. ರೆಡ್ಡಿಯವರ ತಮ್ಮ ವರದಿಯನ್ನು ಕಳುಹಿಸಿಕೊಟ್ಟು ಆಗಲೇ 8-9 ತಿಂಗಳಾಗಿದ್ದರೂ, ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ. ಹಾಗೆ ಎಂಟು ತಿಂಗಳಿನಿಂದ ಪರಿಶೀಲನೆ ಮಾಡಬೇಕಾದ್ದೇನಿದೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಯಾವ ಕಾರಣ ಕ್ಕಾಗಿ ಅವರನ್ನು ನೇಮಕಮಾಡಿತ್ತೋ ಆ ಬಗ್ಗೆ ಅವರ ವರದಿಯು ಇನ್ನೂ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸರ್ಕಾರದವರು ಈ ಪರಿಶೀಲನೆ ಇನ್ನೂ ಎಷ್ಟು ದಿನ ತೆಗೆದುಕೊಳ್ಳಬಹುದು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ವರದಿಯಲ್ಲಿ ಅನೇಕ ಬಾಬುಗಳು ಸೇರಿವೆ. ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟದ್ದು ಮತ್ತು ಇತರೇ ಕೈಗಾರಿಕೆ, ವೃತ್ತಿ ಶಿಕ್ಷಣ ಮುಂತಾಗಿ ನಾನಾ ವಿದ್ಯಾ ಭಾಗಗಳಿಗೆ ಸಂಬಂಧಪಟ್ಟದ್ದು—ಎಲ್ಲಾ ಸೇರಿ ಒಂದು ದೊಡ್ಡ ವರದಿಯಾಗಿದೆ. ಅದನ್ನೆಲ್ಲಾ ಪರಿಶೀಲನೆ ಮಾಡಬೇಕಾದರೆ ಇನ್ನೂ ಕೆಲವು ತಿಂಗಳುಗಳಾಗಬೇಕು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ವರದಿಯನ್ನು ದಯಪಟ್ಟು ಸರ್ಕಾರದವರು ಈ ಸಭೆಯ ಮುಂದಿಡುತ್ತಾರೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಸರ್ಕಾರದವರು ಪ್ರಕಟಣೆಗೆ ಕೊಟ್ಟು ಮಾರಾಟಕ್ಕೂ ಇಟ್ಟಿದ್ದಾರೆ. ಯಾರು ಬೇಕಾದರೂ ಕೊಂಡುಕೊಳ್ಳಬಹುದು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ವರದಿಯನ್ನು ಸಾಧ್ಯವಾದಷ್ಟು ಜಾಗ್ರತೆ ಜಾರಿಗೆ ತರಬೇಕೆಂದು ಶಿಫಾರಸ್ಸು ಮಾಡಿದ್ದಾರೆಯೇ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಷ್ಟು ಜಾಗ್ರತೆ ಜಾರಿಗೆ ತರಬೇಕೆಂದೇ ಅವರು ವರದಿ ಕಳುಹಿಸಿರುವುದು. But it all depends upon the availability of finance.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅವರ ಈ ವರದಿಯನ್ನು ತರ್ಜುಮೆ ಮಾಡುವುದಕ್ಕೆಂದೇ ಇಲ್ಲಿಗೆ ಬಂದರೊ ಅಥವಾ ಇನ್ನೇನಾದರೂ ಕೆಲಸವಿತ್ತೋ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅವರನ್ನು ವಿದ್ಯಾ ಭ್ಯಾಸದ ಸಲಹೆಗಾರರಾಗಿ ತೆಗೆದುಕೊಂಡಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸಲಹೆಗಾರರು ಎಂದಾದಮೇಲೆ, ಅವರು ಈ ವರದಿಯನ್ನು ಕೊಟ್ಟು ಬಿಟ್ಟಮೇಲೆ ಇನ್ನೇನು ಅವರಿಗೆ ಕೆಲಸ? What is the nature of work he is doing?

Mr. SPEAKER.—How do these questions relating to his appointment and the